◆ **ಬೂದಾಳು: ಕನ್ನಡ ಸಾಹಿತ್ಯದ ನಿಮ್ಮ ಓದಿನಲ್ಲಿ ನವ್ಯ ಲೇಖಕರ ಅನುಸಂಧಾನ ಹೆಚ್ಚಾಗಿದೆ. ದಲಿತ ಬಂಡಾಯದ ಲೇಖಕರನ್ನು ಹೇಗೆ ನೋಡುವಿರಿ?**

ನನ್ನ ಥಿಸಿಸ್ ಮೂವತ್ತೈದು ವರ್ಷದ ಹಿಂದೆ ಬರೆದಿದ್ದು. ಆವಾಗ ದಲಿತ ಬಂಡಾಯ ಸಾಹಿತ್ಯ ನಿಧಾನವಾಗಿ ಬೆಳೆಯುತ್ತಿತ್ತು. ನನ್ನ ಪುಸ್ತಕದಲ್ಲಿ ದೇವನೂರ, ತೇಜಸ್ವಿ, ಸಾರಾ ಅಬೂಬಕರ್, ಬೊಳುವಾರು ಅವರ ಕತೆಗಳನ್ನು ಚರ್ಚಿಸಿದ್ದೀನಿ. ಕನ್ನಡದಲ್ಲಿ ಅನೇಕ ಚಳವಳಿಗಳು ಇವೆ. ಸೂಕ್ಷ್ಮವಾದ ಮನೋವಿಶ್ಲೇಷಣೆ ನವ್ಯದ ಒಂದು ಗುಣ. ಅದು ದಲಿತ ಬಂಡಾಯ ಸಾಹಿತ್ಯದಲ್ಲಿ ಕಡಿಮೆ. ಆದ್ದರಿಂದ ಹೆಚ್ಚು ನವ್ಯ ಸಾಹಿತ್ಯ ತೆಗೆದುಕೊಂಡೆ. ಶಾಬ್ದಿಕವಾಗಿ ಅದು ನನ್ನ ಕೆಲಸಕ್ಕೆ ಅನುಕೂಲವಾಗಿತ್ತು. ನನ್ನ ಪುಸ್ತಕದ ಎರಡನೇ ಆವೃತ್ತಿಯ ಮುನ್ನುಡಿಯಲ್ಲಿ ನಾನು ಇದನ್ನು ಹೇಳಿದೀನಿ. 'ಕನ್ನಡದಲ್ಲಿ 20 ವರ್ಷಗಳ ನಂತರ ಬೇರೆ ಧ್ವನಿಗಳು ಬಂದಿವೆ. ಇಂತಹ ಅಧ್ಯಯನ ನಾನು ಇವತ್ತು ಮತ್ತೆ ಮಾಡಿದರೆ, ಬೇರೆ ರೀತಿಯ ಕೃತಿಗಳನ್ನು ಸೇರಿಸಬೇಕಾಗುತ್ತದೆ. ಇದು ಹಳೆಯ ಪುಸ್ತಕದ ಆವೃತ್ತಿ. ದೋಷವಿದ್ದರೆ ಕ್ಷಮಿಸಿ' ಅಂತ.

ಸಂದರ್ಶನದ ಬಳಿಕ ನಟರಾಜ್ ಹಾಗೂ ಜೆಯ್ದೆನ್‌ಬೋಸ್, ಬೌದ್ಧ ಅಧ್ಯಯನಗಳ ಬಗ್ಗೆ ಸುದೀರ್ಘವಾಗಿ ವಿಚಾರ ವಿನಿಮಯ ಮಾಡಿಕೊಂಡರು. ದೀಪು, ತಂತ್ರಜ್ಞಾನ ಮತ್ತು ಕನ್ನಡ ಅಧ್ಯಯನಗಳ ಸಂಬಂಧದ ಬಗ್ಗೆ ಚರ್ಚಿಸಿದರು. ಮೂರು ತಾಸುಗಳ ಚರ್ಚೆಯಿಂದ ದಣಿವಾಗಿತ್ತು. ನಾವು ತೆಗೆದುಕೊಂಡು ಹೋಗಿದ್ದ ಕನ್ನಡ ಪುಸ್ತಕಗಳನ್ನು ಜೆಯ್ದೆನ್‌ಬೊಸ್ ಅವರಿಗೆ ಕೊಡುಗೆಯಾಗಿ ನೀಡಿದೆವು. ಅವರು ನಮಗೆ 'ವಿಕ್ಷೇಪ'ದ ಪ್ರತಿಯನ್ನು ಕೊಟ್ಟರು. ಜಗತ್ತಿನಾದ್ಯಂತ ಕನ್ನಡಿಗರು ಹರಡಿದ್ದಾರೆ. ಆದರೆ, ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿಗಳ ಶೈಕ್ಷಣಿಕ ಅಧ್ಯಯನದ ಸಂಸ್ಥೆಗಳು ಹರಡಿಲ್ಲ. ಇರುವ ಸಂಸ್ಥೆಗಳು ಬಿಕ್ಕಟ್ಟನ್ನು ಎದುರಿಸುತ್ತಿವೆ. ಅದರ ಕೆಲವು ಆಯಾಮಗಳು ಮಾತುಕತೆಯಲ್ಲಿ ಗೊತ್ತಾದವು. ಪಶ್ಚಿಮದ ಬಗ್ಗೆ ನಮ್ಮಲ್ಲಿ ಪ್ರಚಲಿತವಾಗಿರುವವ ಕೆಲವು ಗ್ರಹಿಕೆಗಳು ಒಡೆದು ಮರುಚಿಂತನೆಗೆ ಹಚ್ಚಿದವು. ನಮ್ಮ ಜರ್ಮನಿ ಪ್ರವಾಸಕ್ಕೆ ಶೈಕ್ಷಣಿಕ ಆಯಾಮ ನೀಡಿದ ಜೆಯ್ದೆನ್‌ಬೊಸ್ ಅವರಿಗೆ ಧನ್ಯವಾದ ಸಲ್ಲಿಸಿ ಮರಳಿದೆವು.


## ರಹಮತ್ ತರೀಕೆರೆ

ಕನ್ನಡದ ಪ್ರಮುಖ ಲೇಖಕ ರಹಮತ್ ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರು. ಸಾಹಿತ್ಯ ವಿಮರ್ಶೆ, ಸಂಶೋಧನೆ, ಪ್ರವಾಸ ಕಥನ, ವಿಚಾರ ಸಾಹಿತ್ಯ, ಜೀವನ ಚರಿತ್ರೆ, ಸಾಹಿತ್ಯ ಮೀಮಾಂಸೆ ಪ್ರಕಾರಗಳಲ್ಲಿ ಪುಸ್ತಗಳನ್ನು ಬರೆದಿದ್ದಾರೆ. 'ಪ್ರತಿಸಂಸ್ಕೃತಿ', 'ಮರದೊಳಗಣ ಕಿಚ್ಚು', 'ಅಮೀರ್‌ಬಾಯಿ ಕರ್ನಾಟಕಿ', 'ನಡೆದಷ್ಟೂ ನಾಡು', 'ಕರ್ನಾಟಕದ ನಾಥಪಂಥ', 'ಕರ್ನಾಟಕದ ಸೂಫಿಗಳು', 'ಅಂಡಮಾನ್ ಕನಸು', 'ಕತ್ತಿಯಂಚಿನ ದಾರಿ', 'ಲೋಕವಿರೋಧಿಗಳ ಜೊತೆಯಲ್ಲಿ', 'ಹಿತ್ತಲ ಜಗತ್ತು', 'ನ್ಯಾಯನಿಷ್ಠುರಿಗಳ ಜತೆಯಲ್ಲಿ' ಅವರ ಪ್ರಮುಖ ಪುಸ್ತಕಗಳು. ರಹಮತ್, ಹಂಪಿಯ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದಲ್ಲಿ ಪ್ರಾಧ್ಯಾಪಕರು.